

ಚಿಕ್ಕ ಗಾತ್ರದ ಕುದುರೆ

# ಚಿಕ್ಕ ಗಾತ್ರಕ್ಕೆ ಸಿಕ್ಕ ದೊಡ್ಡ ಮನ್ನಣೆ



ಪ್ರಪಂಚದ ಅತೀ ಚಿಕ್ಕ ಬೆಕ್ಕು



ಮಾಲೀಕಳ ಜತೆಗೆ ಪುಟ್ಟ ನಾಯಿ

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಈ ಚಿತ್ರದಲ್ಲಿರುವ ಪ್ರಾಣಿಗಳು ತಮ್ಮ ಗಾತ್ರದಿಂದಲೇ ವಿಶ್ವ ದಾಖಲೆಯ ಮನ್ನಣೆ ಗಳಿಸಿದೆ.

ಮೊದಲ ಚಿತ್ರದಲ್ಲಿರುವ ಕುದುರೆಯನ್ನೊಮ್ಮೆ ನೋಡಿ. ಚಿತ್ರದಲ್ಲಿರುವ ದೊಡ್ಡ ಕುದುರೆಯ ಚಿಕ್ಕ ಮರಿ ಇದು ಎಂದುಕೊಂಡರೆ ನಿಮ್ಮ ಊಹೆ ತಪ್ಪು. ಇವೆರಡೂ ಸಮಾನ ವಯಸ್ಸಿನ ಕುದುರೆಗಳು. ಆದರೆ ಥಂಬೇಲಿನಾ ಹೆಸರಿನ ಪುಟಾಣಿ ಗಾತ್ರದ ಕುದುರೆ ಸಹಜ ಬೆಳವಣಿಗೆಯನ್ನು ಹೊಂದಿಲ್ಲ. ಇದರ ಎತ್ತರ ಕೇವಲ 43.18 ಸೆಂ.ಮೀ ! ಪ್ರಪಂಚದ ಅತೀ ಚಿಕ್ಕ ಕುದುರೆ ಎಂಬ ಬಿರುದನ್ನು ಇದು ಪಡೆದಿದೆ.

ಎರಡನೇ ಚಿತ್ರದಲ್ಲಿರುವ ಬೆಕ್ಕು ಪ್ರಪಂಚದಲ್ಲಿಯೇ ಅತೀ ಚಿಕ್ಕದು ಎಂದು ವಿಶ್ವ ದಾಖಲೆಯ ಪುಟ ಸೇರಿದೆ. ಪೆಬಲ್ಸ್ ಹೆಸರಿನ ಈ ಬೆಕ್ಕಿನ ಎತ್ತರ 12.4 ಸೆಂ.ಮೀ.! 500 ಗ್ರಾಮ್ ತೂಕವುಳ್ಳ ಈ ಬೆಕ್ಕಿಗೀಗ ಎರಡು ವರ್ಷ. ವಂಶವಾಹಿನಿ ಸಮಸ್ಯೆಯೇ ಇದರ ಈ ಬೆಳವಣಿಗೆಗೆ ಕಾರಣವಂತೆ.

ಕೊನೆಯ ಚಿತ್ರ ಚಿಹುವಾಹುವಾ ತಳಿಯ ನಾಯಿಯದು. 12.4 ಸೆಂ.ಮೀ. ಎತ್ತರವಿರುವ ಈ ನಾಯಿ 650 ಗ್ರಾಮ್ ತೂಕವಿದೆ. ಇದರ ಈ ಬೆಳವಣಿಗೆಯನ್ನು ಕಂಡು ಇದರ ಮಾಲೀಕರಿಗೆ ಮೊದಲು ಭಯವಾಗಿತ್ತಂತೆ. ಪೂರ್ಣ ಬೆಳವಣಿಗೆಯ ನಂತರ ಆರೋಗ್ಯವಾಗಿರುವುದನ್ನು ಕಂಡು ಸಂತಸವಾಗಿದೆಯಂತೆ.

ಅಂದ ಹಾಗೆ ಈ ಪುಟ್ಟ ಜೀವಿಗಳು ಪ್ರಾಣಿಪ್ರಿಯರ ಗಮನ ಸೆಳೆದರೆ, ಮಾಲೀಕರ ಸಂಭ್ರಮವಂತೂ ಹೇಳತೀರದು.

■ ನಾರಾಯಣ ಬಾಬಾನಗರ